## ನಮ್ಮೊಡನೆ

# ಈ ಹಿಂಸೆಗೆ ಕೊನೆ ಎಂದು?

**ಮಾ**ಧ್ಯಮಗಳಲ್ಲಿ ನಕ್ಸಲೀಯರದ್ದೇ ಸುದ್ದಿ. ಛತ್ತೀಸ್‌ಗಢದ ದಾಂತೆವಾಡದಲ್ಲಿ ನಡೆದ ನಕ್ಸಲೀಯರ ದಾಳಿಯಂತೂ ಬರ್ಬರವಾದದ್ದು. ಈ ದಾಳಿಯಲ್ಲಿ ಕೇಂದ್ರ ಮೀಸಲು ಪಡೆಯ 76 ಭದ್ರತಾ ಸಿಬ್ಬಂದಿಯನ್ನು ಮಾವೊವಾದಿಗಳು ಬಲಿ ತೆಗೆದುಕೊಂಡಿದ್ದಾರೆ. ದೇಶಾದ್ಯಂತ ಈ ಘಟನೆ ಎಷ್ಟು ತಲ್ಲಣ ಉಂಟು ಮಾಡಿದೆಯೆಂದರೆ, ಗೃಹ ಸಚಿವ ಪಿ.ಚಿದಂಬರಂ ಅವರು ಘಟನೆಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲೂ ಮುಂದಾಗಿದ್ದರು. ಆದರೆ ರಾಜೀನಾಮೆಯಿಂದ ಸಮಸ್ಯೆಯ ಪರಿಹಾರಕ್ಕೆ ಅನುಕೂಲ ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿಯವರು ರಾಜೀನಾಮೆ ಅಂಗೀಕರಿಸಿಲ್ಲ. ಮಾವೊವಾದಿಗಳ ಈ ಬರ್ಬರ ದಾಳಿಗೆ ಮಾಜಿ ನಕ್ಸಲೀಯ ನಾಯಕರ ಸಹಿತ ಎಲ್ಲೆಡೆಯಿಂದಲೂ ಖಂಡನೆ ವ್ಯಕ್ತವಾಗಿದೆ. ಆದರೆ ಮಾವೊವಾದಿಗಳು 'ಸರಕಾರದ ದಮನನೀತಿಯ ವಿರುದ್ಧ ತಮ್ಮ ಸಶಸ್ತ್ರ ಹೋರಾಟ ಮುಂದುವರಿಯಲಿದೆ' ಎಂದು ಪ್ರಕಟಿಸಿದ್ದಾರೆ. 'ಮಾವೊವಾದಿಗಳ ಅಟ್ಟಹಾಸವನ್ನು ತಡೆಯಲು ಅವರ ವಿರುದ್ಧ ಸಮರವನ್ನು ಇನ್ನಷ್ಟು ತೀವ್ರವಾಗಿ ಮುಂದುವರಿಸುವುದಾಗಿ' ಕೇಂದ್ರ ಮೀಸಲು ಪೊಲೀಸ್ ಪಡೆಯ ಮಹಾನಿರ್ದೇಶಕರು ಹೇಳಿದ್ದಾರೆ. ಛತ್ತೀಸ್‌ಗಢ, ಪಶ್ಚಿಮಬಂಗಾಳ, ಒಡಿಶಾ, ಬಿಹಾರ ಮುಂತಾದ ರಾಜ್ಯಗಳ ದಟ್ಟ ಕಾಡುಗಳಲ್ಲಿ ಮಾವೊವಾದಿಗಳು ಪರ್ಯಾಯ ಸರಕಾರವನ್ನೇ ನಡೆಸುತ್ತಿರುವಂತಹ ಸ್ಥಿತಿ ಇದೆ. ಪ್ರಜಾಪ್ರಭುತ್ವದ ನಿಯಮಗಳನ್ನು ನಿರಾಕರಿಸಿರುವ ಮಾವೊವಾದಿ ನಕ್ಸಲರು, ಇಡೀ ವ್ಯವಸ್ಥೆಯನ್ನೇ ಹಿಂಸೆಯ  ಮೂಲಕ ಬುಡಮೇಲು ಮಾಡಲು ಪ್ರಯತ್ನಿಸುತ್ತಿದ್ದಾರೆ.

'ಹಿಂಸೆಯಿಂದ ಅಂತಿಮವಾಗಿ ಏನನ್ನೂ ಸಾಧಿಸಲು ಆಗುವುದಿಲ್ಲ ಎನ್ನುವುದನ್ನು ನಕ್ಸಲೀಯರಿಗೆ ತಿಳಿಸಿ ಹೇಳುವುದು ಹೇಗೆ?' ಎನ್ನುವುದು ಮಹತ್ವದ ಪ್ರಶ್ನೆ. ಹಾಗೆ ನೋಡಿದರೆ ನಕ್ಸಲರ ಸಮಸ್ಯೆ ಇಂದು ನಿನ್ನೆಯದಲ್ಲ. ಐದಾರು ದಶಕಗಳ ಇತಿಹಾಸ ಅದಕ್ಕಿದೆ. ಮುಖ್ಯವಾಗಿ ಭೂಮಾಲೀಕರ ಶೋಷಣೆಗೆ ಒಳಗಾದ ಭೂಹೀನ ಗ್ರಾಮೀಣ ಜನರನ್ನು ಸಂಘಟಿಸುವ ಮೂಲಕ ಮಾವೊವಾದಿ ಪಕ್ಷ ಬೆಳೆಯುತ್ತಾ ಬಂದಿದೆ. 'ಹಿಂಸೆಯಿಂದ ಮಾತ್ರ ಸಮಾಜದ ಅಸಮಾನತೆ ತೊಡೆದು ಹಾಕಲು ಸಾಧ್ಯ' ಎನ್ನುವ ಅವರ ನಂಬಿಕೆಯೂ ಹಳೆಯದ್ದೇ. ಆದರೆ ನಕ್ಸಲೀಯ ಚಳವಳಿಯ ಇತಿಹಾಸವನ್ನು ಗಮನಿಸಿದರೆ, ಈ ಹಿಂಸಾ ನೀತಿಯನ್ನು ಬೋಧಿಸಿದವರೇ ಜೀವನದ ಇಳಿಗಾಲದಲ್ಲಿ ಅದನ್ನು ನಿರಾಕರಿಸುತ್ತಾ ಬಂದದ್ದನ್ನೂ ಗಮನಿಸಬಹುದು. ನಕ್ಸಲೀಯ ಚಳವಳಿಯ ಸ್ಥಾಪಕರಲ್ಲಿ ಒಬ್ಬರಾದ, ಇತ್ತೀಚೆಗೆ ನಿಧನರಾದ ಕಾನು ಸನ್ಯಾಲ್ ಕೂಡಾ 'ಹಿಂಸೆ ನಿರರ್ಥಕ' ಎನ್ನುವುದನ್ನು ಕೊನೆಗಾಲದಲ್ಲಿ ಒತ್ತಿ ಹೇಳಿದ್ದರು. ಆಂಧ್ರಪ್ರದೇಶದಲ್ಲಿ ಹಿಂಸಾತ್ಮಕ ನಕ್ಸಲ್ ಚಳವಳಿಯನ್ನು ಹುಟ್ಟುಹಾಕಿದ ಅನೇಕ ಮುಖಂಡರು, ಹಲವು ವರ್ಷಗಳ ಬಳಿಕ 'ಹಿಂಸೆಯಿಂದ ಯಾವುದೇ ಪ್ರಯೋಜನವಾಗುವುದಿಲ್ಲ' ಎಂಬುದನ್ನು ಮನಗಂಡು ಶರಣಾಗತರಾಗಿದ್ದೂ ನಡೆದಿದೆ. ಆದರೆ ಹಿಂಸಾತ್ಮಕ ಚಳವಳಿಯ ನೇತೃತ್ವ ವಹಿಸಿರುವ ಹೊಸ ಯುವ ನಾಯಕತ್ವ, ತಮ್ಮದೇ ಹಳೆಯ ನಾಯಕರ ಅನುಭವದಿಂದ ಪಾಠ ಕಲಿಯಲು ಸಿದ್ಧರಿಲ್ಲ ಎನ್ನುವುದು ವಿಪರ್ಯಾಸ. ಬಹುಶಃ ಈ ಮುಖಂಡರಿಗೂ ವಯಸ್ಸಾಗಿ ಮುಂದೊಂದು ದಿನ ಹಿಂಸೆಯ ವಿರುದ್ಧ ಜ್ಞಾನೋದಯ ಆಗಲೂಬಹುದು. ಆದರೆ ಅಲ್ಲಿಯವರೆಗೆ ಹರಿಯುವ ಮುಗ್ಧರ ನೆತ್ತರಿಗೆ ಯಾವ ಬೆಲೆ ಕಟ್ಟುವುದು?

ಛತ್ತೀಸ್‌ಗಢದಲ್ಲಿ ಮಾವೊವಾದಿ ಚಳವಳಿ ಬೆಳೆಯಲು ಅಲ್ಲಿನ ಸರಕಾರದ ಜನವಿರೋಧಿ, ಬಂಡವಾಳಶಾಹಿ ನೀತಿಯೇ ಕಾರಣ ಎನ್ನಲಾಗುತ್ತಿದೆ. ಗಣಿಗಾರಿಕೆ ಉದ್ಯಮದ ಜನವಿರೋಧಿ ನೀತಿ ಅಲ್ಲಿನ ಸರಕಾರಕ್ಕೆ ಕಂಟಕವಾಗಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ. ಪಶ್ಚಿಮಬಂಗಾಳ ಮತ್ತು ಬಿಹಾರದಲ್ಲಿ ಭೂಸ್ವಾಮ್ಯವೇ  ಪ್ರಧಾನ  ಪ್ರಶ್ನೆಯಾಗಿದೆ. ಕರ್ನಾಟಕದಲ್ಲಿ ನಕ್ಸಲೀಯ ಚಳವಳಿ ಭೂಗತವಾಗಿ ಮಿಸುಕಾಡುತ್ತಿರುವುದು ಆಗಾಗ್ಗೆ ಸುದ್ದಿಯಾಗುತ್ತಿದೆಯಾದರೂ, ಉತ್ತರದ ರಾಜ್ಯಗಳಂತೆ ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬೆದರಿಕೆ ಒಡ್ಡಿಲ್ಲ. ಹಾಗೆಂದು ನಾವು ಈ ಸಮಸ್ಯೆಯನ್ನು ನಿರ್ಲಕ್ಷಿಸುವುದು ಜಾಣತನವಲ್ಲ. ಪಶ್ಚಿಮಘಟ್ಟದ ಕಾಡುಗಳಲ್ಲಿ ಭೂಹೀನ ಆದಿವಾಸಿಗಳ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ನಿವಾರಿಸುವ ಪ್ರಾಮಾಣಿಕ ಪ್ರಯತ್ನಗಳನ್ನು ನಮ್ಮ ಸರಕಾರವೂ ಮಾಡಬೇಕಿದೆ. ಕೇವಲ ಪೊಲೀಸ್ ಬಲದಿಂದ ಎಲ್ಲವನ್ನೂ ನಿಭಾಯಿಸಬಹುದೆಂಬ ವಿಶ್ವಾಸ, ಪ್ರಜಾಪ್ರಭುತ್ವದ ಆಶಯಕ್ಕೆ ಪೂರಕವಲ್ಲ. ನಕ್ಸಲರಿಗೆ ಜನಬೆಂಬಲ ಸಿಗದಂತಹ ವಾತಾವರಣವನ್ನು ಸರಕಾರ ನಿರ್ಮಿಸಬೇಕೆಂದರೆ, ಭೂಹೀನ  ಕೃಷಿಕರ, ಆದಿವಾಸಿಗಳ ಸಮಸ್ಯೆಯನ್ನು ಇನ್ನಷ್ಟು ಕಾಳಜಿಪೂರ್ವಕ ಅರ್ಥ ಮಾಡಿಕೊಳ್ಳಬೇಕಿದೆ. ಹಾಗೆಯೇ ಪೊಲೀಸರ ಜತೆಗಿನ ಸ್ಥಳೀಯ ಭೂಮಾಲಕರ ಅಪವಿತ್ರ ಮೈತ್ರಿಯ ಅಪಾಯಗಳನ್ನೂ ಮನಗಾಣಬೇಕಿದೆ. 40 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಲ್ಲೂ ನಕ್ಸಲ್ ಚಳವಳಿ ಇದೇ ರೀತಿ ಸಣ್ಣ ಮಟ್ಟದಲ್ಲೇ ಇತ್ತು. ಸರಕಾರ ಆಗ ಉದಾಸೀನ ಮಾಡಿದ್ದರಿಂದಲೇ ಇವತ್ತಿನ ಭಯಾನಕ ಮಟ್ಟಕ್ಕೆ ಅಲ್ಲಿನ ಮಾವೊವಾದಿಗಳು ಬೆಳೆದು ನಿಂತಿದ್ದಾರೆ ಎನ್ನುವುದನ್ನು ನಾವೂ ಮರೆಯಬಾರದು. ಏನಿದ್ದರೂ, ನಮ್ಮ ಸುತ್ತ ಯಾವುದೇ ರೀತಿಯ ಹಿಂಸಾತ್ಮಕ ಚಳವಳಿಗಳು ಬೆಳೆಯದಂತೆ ಎಚ್ಚರ ವಹಿಸಬೇಕಾದದ್ದು ಎಲ್ಲ ಪ್ರಜಾಪ್ರಭುತ್ವವಾದಿಗಳ ಕರ್ತವ್ಯವಾಗಬೇಕು.

■ ಬಿ.ಎಂ. ಹನೀಫ್

ಛತ್ತೀಸ್‌ಗಢದಲ್ಲಿ ಮಾವೊವಾದಿ ಚಳವಳಿ ಬೆಳೆಯಲು ಅಲ್ಲಿನ ಸರಕಾರದ ಜನವಿರೋಧಿ, ಬಂಡವಾಳಶಾಹಿ ನೀತಿಯೇ ಕಾರಣ ಎನ್ನಲಾಗುತ್ತಿದೆ. ಗಣಿಗಾರಿಕೆಯ ಜನವಿರೋಧಿ ನೀತಿ ಅಲ್ಲಿನ ಸರಕಾರಕ್ಕೆ ಕಂಟಕವಾಗಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ. ಪಶ್ಚಿಮಬಂಗಾಳ ಮತ್ತು ಬಿಹಾರದಲ್ಲಿ ಭೂಸ್ವಾಮ್ಯವೇ  ಪ್ರಧಾನ ಪ್ರಶ್ನೆಯಾಗಿದೆ. ಕರ್ನಾಟಕದಲ್ಲಿ ನಕ್ಸಲೀಯ ಚಳವಳಿ ಭೂಗತವಾಗಿ ಮಿಸುಕಾಡುತ್ತಿರುವುದು ಆಗಾಗ್ಗೆ ಸುದ್ದಿಯಾಗುತ್ತಿದೆಯಾದರೂ, ಉತ್ತರದ ರಾಜ್ಯಗಳಂತೆ ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬೆದರಿಕೆ ಒಡ್ಡಿಲ್ಲ.

